|| Jai Sri Gurudev ||
Sri Adichunchanagiri Shikshana Trust ®

# SJB Institute of Technology

An Autonomous Institute under VTU
Approved by AICTE-New Delhi , Recognized by UGC with 2(f) &12(B)
No. 67, BGS Health & Education City, Dr. Vishnuvardhan Road, Kengeri, Bengaluru - 560060

+91-80-28612445 /46 | principal@sjbit.edu.in | +91-80-28612651 | www.sjbit.edu.in

Ref : SJBIT / ADM/299/2023-24 Date: 15/09/2023

**To,**
The Registrar
Visvesvaraya Technological University (VTU)
"Jnana Sangama"
Belagavi - 590018

Sir,

**Subject :** Compliance Report 2023-24
**Reference:**VTU/ ACA-LIC/2023-24/ 2675/52

With reference to the above, the Compliance report along with necessary documents are enclosed for your kind reference.

Thanking You,

Sincerely,

**Dr. K.V. Mahendra Prashanth**
Principal

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

*Encl:*
1. *Compliance Report AY 2023-24*
2. *DA details*
3. *Alumni Association Registration Copy*

# Compliance Report 2023-24

Reference : VTU/ ACA-LIC/2023-24/ 2675/52

| LIC OBSERVATION | | | Action Taken |
|---|---|---|---|
| **Faculty shortfall details** | | | |
| **S. No** | **Department** | **Shortfall Observations** | **Action Taken** |
| 1 | Computer Aided Design of Structures - PG | Shortfall in Professors - 1 ; Shortfall in Associate Professor - 1; Shortfall in Asst. Professor-1 | There is no shortfall of faculty with respect to Computer Aided Design of Structures – PG. In Civil Engineering dept. there are UG- 14 faculty members; PG - 6 Faculty members |
| 2 | Master of Computer Applications - PG | Shortfall in Professors - 1 ; Shortfall in Asst. Professor-1 | The MCA Program is commencing from AY 2023-24- for the first year requirement, selection process is under progress . |
| 3 | Structural Engineering - PG | Shortfall in Professors - 1 ; Shortfall in Associate Professor - 1; Shortfall in Asst. Professor-1 | There is no shortfall of faculty with respect to Structural Engineering – PG. In Civil Engineering dept. there are UG- 14 faculty members; PG- 6 Faculty members |
| 4 | Artificial Intelligence & Machine Learning - UG | Shortfall in Associate Professor - 1; Shortfall in Asst. Professor-5 | As per the norms, the shortfall has been fulfilled |
| 5 | Computer Science & Engineering ( Data Science) - UG | Shortfall in Professors - 1 ; Shortfall in Associate Professor - 2; Shortfall in Asst. Professor-6 | As per the norms, the shortfall has been fulfilled |
| 6 | Information Science & Engineering - UG | Shortfall in Professors - 1 ; Shortfall in Associate Professor - 1; Shortfall in Asst. Professor-1 | As per the norms, the shortfall has been fulfilled |

**General Observations**

| | **Observations** | **Clarifications** |
|---|---|---|
| 1 | DA to faculty & staff : 50 % | The faculty members are given DA of 170 % and for non teaching the DA is 50%. The details given in Annexure . |
| 2 | Alumni Association Registration | Alumni Association registered with Govt. of Karnataka Dt: 28-12-2010; Registration no: |

| | | |
|---|---|---|
| | | SOR/BLU/DR/1103/ 2010-11. Copy attached |
| 3 | Foreman shortage | There are a total of 8 foremen available, however, 2 more foremen will be appointed, for new Branches. The process for appointing the balance no. of foremen are in progress. |
| 4 | Helper shortage | There is no shortage of helpers. All departments have adequate helpers as per norms |
| 5 | Non-uniform DA to the faculty members in all cadres and staff members | Same as Sl.No.1 |
| 6 | Staff quarters not available | Staff quarter location has been identified in the campus and the project is under progress |

II Jai Sri Gurudev II
SRI ADICHUNCHANAGIRI SHIKSHANA TRUST (R)
# SJB Institute of Technology
(Affiliated to Visvesvaraya Technological University, Belagavi and Approved by AICTE and Accredited by NAAC with 'A' Grade, CGPA-3.22 - New Delhi )
#67, BGS Health & Education City, Dr. Vishnuvardhan Road, Kengeri, Bengaluru – 560060.
SJBIT
Ph : 080 - 28612445 / 6
Fax : 080 - 2861 2651
Email : principal@sjbit.edu.in
Website : www.sjbit.edu.in

Ref : SJBIT/

Date : 01.01.2023

## Pay Scale details for the Academic Year -2023-24

### Teaching Staff:

1. Pay Scale to faculty as per AICTE Norms

| Sl No | Categories | Pay Band |
|---|---|---|
| 1 | Professors | Rs.34700-67000 +AGP |
| 2 | Asso.Professors | Rs.34700-67000 +AGP |
| 3 | Asst. Professors | Rs.15600-39100+AGP |

2. DA to faculty

| Sl No | Categories | DA% | HRA% |
|---|---|---|---|
| 1 | Professors | 170% | 25% |
| 2 | Asso.Professors | Up to 110% | 25% |
| 3 | Asst. Professors | 160% | 25% |

### Non-Teaching Staff:

3. Pay Scale: As per state govt. 5th Pay Revised scale

DA – 50%, HRA -25%

Approved by

Managing Director

Managing Director
SJB Institute of Technology
BGS Health & Education City
No. 67, Uttarahalli Road, Kengeri,
Bangalore-560 060

ಈ ದಸ್ತಾವೇಜು....14.........ಘುಟಗಳನ್ನು ಒಳಗೊಂಡಿರುತ್ತದೆ,
ಈ ದಸ್ತಾವೇಜು ಸಂಖ್ಯೆ...1103/10-11....ಆಗಿರುತ್ತದೆ,

ರವರಿಗೆ

ಸಂಘಗಳ ನೋಂದಣಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ಮಾನ್ಯರೇ,

ವಿಷಯಃ ಸಂಘವನ್ನು ನೋಂದಣಿ ಮಾಡುವ ಬಗ್ಗೆ.

ನಾವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯನ್ವಯ 1960ರ ಮೇರೆಗೆ ಸಂಘವನ್ನು ನೋಂದಾಯಿಸಲು ಸಂಘದ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಿ ಹಾಗೂ ಅದಕ್ಕೆ ತಗಲುವ ನೋಂದಣಿ ಶುಲ್ಕವನ್ನು ತಮ್ಮ ಕಛೇರಿಯಲ್ಲಿ ಜಮಾ ಮಾಡಿ ನಮ್ಮ ಸಂಘವನ್ನು ನೋಂದಣಿ ಮಾಡಿ ಕೊಡಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

1.
2.
3.
4.
5.
6.
7.
8.
9.
10.

ಚಲನ್ ನಂ:...152...Rs. 1,000/-.........
ದಿನಾಂಕ:.........16-12-2010...........
ಸ್ಕ್ಯಾನಿಂಗ್ ಶುಲ್ಕ ರೂ:.....600/-...........
ರಸೀದಿ ಸಂಖ್ಯೆ:.........221687..............
ದಿನಾಂಕ:.........16-12-2010..............

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

ಈ ದಸ್ತಾವೇಜುಸಂಖ್ಯೆ 1102/10-11 ರ ಪುಟಸಂಖ್ಯೆ 02

# ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ

ಎಸ್ ಜೆ ಬಿ ಇನ್ಸ ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬಿ.ಜಿ.ಎಸ್.ಹೆಲ್ತ್ ಅಂಡ್ ಎಜುಕೇಷನ್ ಸಿಟಿ, ಉತ್ತರಹಳ್ಳಿ ರೋಡ್, ಕೆಂಗೇರಿ, ಬೆಂಗಳೂರು-560 060.

## ಸಭೆಯ ನಡವಳಿಕೆಗಳು

ವಿಷಯ: ಸಂಘವನ್ನು ನೋಂದಾಯಿಸುವ ಬಗ್ಗೆ.

ದಿನಾಂಕ: 22.11.2010 ರಂದು ಸಂಘದ ಸದಸ್ಯರುಗಳು ಸಭೆ ಸೇರಿ ಆಡಳಿತ ಮಂಡಳಿಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು ಮತ್ತು

**ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ**

ಎಂಬ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ತಯಾರಿಸಿ ಒಪ್ಪಿಸಲಾಯಿತು ಮತ್ತು ಸಂಘಗಳ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಯಿತು. ಈ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ನೋಂದಣಿ ಕಛೇರಿಯಲ್ಲಿ ನೋಂದಾಯಿಸ ಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ತತ್ಸಂಬಂಧವಾಗಿ ಸಂಘದ ಧ್ಯೇಯೋದ್ದೇಶಗಳನ್ನು ಮತ್ತು ನಿಬಂಧನೆಗಳನ್ನು ತಯಾರಿಸಿ ಒಪ್ಪಿಸಲಾಯಿತು.

1.
2.
3.
4.
5.
6.
7.
8.
9.
10.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

ಈ ದಸ್ತಾವೇಜುಸಂಖ್ಯೆ 1103/10-11 ರ ಪುಟಸಂಖ್ಯೆ 03

ಜ್ಞಾಪನಾ ಪತ್ರ

1. ಸಂಘದ ಹೆಸರು : ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ.

2. ಸಂಘದ ವಿಳಾಸ : ಎಸ್ ಜೆ ಬಿ ಇನ್ಸ ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬಿ.ಜಿ.ಎಸ್. ಹೆಲ್ತ್ ಅಂಡ್ ಎಜುಕೇಷನ್ ಸಿಟಿ, ಉತ್ತರಹಳ್ಳಿ ರೋಡ್, ಕೆಂಗೇರಿ, ಬೆಂಗಳೂರು-560 060.

3. ಸಂಘದ ಕಾರ್ಯವ್ಯಾಪ್ತಿ: ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ.

4. ಸಂಘದ ಉದ್ದೇಶಗಳು:-

1. ವಿದ್ಯಾರ್ಥಿ ಮತ್ತು ಶಿಕ್ಷಕರ ವೃಂದದಲ್ಲಿ ಉತ್ತಮ ಸಂಬಂಧವನ್ನೇರ್ಪಡಿಸುವುದು ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.

2.ಎಲ್ಲಾ ವಿದ್ಯಾರ್ಥಿಗಳ ನಡುವೆ ಉತ್ತಮವಾದ ಬಾಂಧವ್ಯ ಬೆಸೆಯುವಂತಹ ಕೆಲಸ ಮಾಡುವುದು. ಮತ್ತು ಅವರ ನಡುವೆ ಪರಸ್ಪರ ಸಹಾಯ, ಸಹಕಾರ ಮನೋಭಾವನೆಯನ್ನು ಬೆಳೆಸುವುದು.

3. ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಆರ್ಥಿಕ ನೆರವು ನೀಡಿ, ಅವರ ವಿದ್ಯಾಭ್ಯಾಸಕ್ಕೆ ನೆರವಾಗುವುದು.

4. ವಿದ್ಯಾರ್ಥಿಗಳ ವರ್ಗದಲ್ಲಿ ದೇಶಭಕ್ತಿ ಮತ್ತು ವ್ಯಕ್ತಿತ್ವ ಬೆಳವಣಿಗೆಯನ್ನು ಬೆಳೆಸುವುದು ಮತ್ತು ಅದಕ್ಕಾಗಿ ಸಂಸ್ಥೆಯ ಆಡಳಿತ ವರ್ಗದೊಂದಿಗೆ ಸಹಕರಿಸುವುದು.

5. ವಿದ್ಯಾರ್ಥಿಗಳ ಔಪಾಚರಿಕ ಮತ್ತು ಅನೌಪಾಚಾರಿಕ ಸಮಾವೇಶಗಳನ್ನು ಅಯೋಜಿಸುವುದು.

6. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾರ್ಯಗಾರ/ಸೆಮಿನಾರ್/ಸಭೆಗಳನ್ನು ನಡೆಸುವುದು ಮತ್ತು ಇದರಿಂದ ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನ ಮತ್ತು ಸಂಪರ್ಕಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಡುವುದು.

7. ಸಮಾಜಕ್ಕೆ ಸಹಾಯ ಮಾಡುವುದಕ್ಕಾಗಿ, ವಿದ್ಯಾರ್ಥಿಗಳಿಗೆ ಸ್ವಯಂ ಸೇವಾ ಕಾರ್ಯಗಳು/ಸಮಾಜ ಸೇವೆಗೆ ವೇದಿಕೆ ಒದಗಿಸುವುದು.

8. ಕರ್ನಾಟಕ ರಾಜ್ಯ ಮತ್ತು ಬೇರೆ ರಾಜ್ಯಗಳ ಪ್ರದೇಶಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳ ಜಾಲಬಂಧ ಕೇಂದ್ರ (ನೆಟವರ್ಕ್) ವನ್ನು ನಡೆಸುವುದು.

9. ಸಧರಿ ಸಂಘವು ಬೇರೆ ಸಂಘ-ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಬೆಳೆಸಿ, ಸಂಘವನ್ನು ಅಭಿವೃದ್ಧಿಪಡಿಸುವುದು.

10. ಸಂಘವು ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವ ದೃಷ್ಟಿಯಿಂದ ವಿದ್ಯಾರ್ಥಿಗಳು ತಮ್ಮ ಜ್ಞಾನ, ಅನುಭವ, ಕೌಶಲ್ಯ, ಬಲ ಇತ್ಯಾದಿಗಳನ್ನು ಯಾವುದೇ ರೀತಿಯಲ್ಲಿ ತಾವು ಇಚ್ಚಿಸುವಷ್ಟು ಅವಧಿಯವರೆಗೂ ಸೇವೆಯನ್ನು ನೀಡಲು ಒಟ್ಟಾಗಿ ಸೇರುವ ಒಂದು ವೇದಿಕೆಯನ್ನು ನಿರ್ಮಿಸುವುದು.

11. ವಿಶ್ವವಿದ್ಯಾಲಯದ ಕೀರ್ತಿಯನ್ನು ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಒಂದು ವಿದ್ಯಾ ಸಂಸ್ಥೆಯಾಗಿ ರೂಪಿಸುವ ರೀತಿಯಲ್ಲಿ ಸಂಘಕ್ಕೆ ತನ್ನ ಕೊಡುಗೆ ನೀಡುವಂತಹ ಚಟುವಟಿಕೆಗಳನ್ನು ಕೈಗೊಳ್ಳುವುದು.

12. ವಿದ್ಯಾರ್ಥಿಗಳ ಅಭಿವೃದ್ಧಿ ದೃಷ್ಟಿಯಿಂದ ವಿದ್ಯಾರ್ಥಿಗಳ ಮತ್ತು ಅವರ ಕುಟುಂಬದವರಿಗಾಗಿ ಉಪನ್ಯಾಸಗಳು, ಸೆಮಿನಾರ್‌ಗಳು, ಸಮ್ಮೇಳನಗಳು, ಸಭೆಗಳು ಮತ್ತು ಔತಣಕೂಟಗಳನ್ನು ಏರ್ಪಡಿಸುವುದು.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

13. ಕನ್ನಡ ನಾಡಿನ ಹೆಸರಾಂತ ಮತ್ತು ಹಿರಿಯ ಕಲಾವಿದರು, ಲೇಖಕರು, ಸಾಹಿತಿಗಳು, ಸಂಗೀತಗಾರರು ಮತ್ತು ಹೋರಾಟಗಾರರನ್ನು ಗುರುತಿಸಿ, ಸನ್ಮಾನಿಸಿ, ಅವರಿಗೆ ಪ್ರಶಸ್ತಿಗಳನ್ನು ನೀಡುವುದರ ಮೂಲಕ ಗೌರವಿಸುವುದು.

14. ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಪ್ರತಿಭಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು. ಕಂಪ್ಯೂಟರ್, ಬೆರಳಚ್ಚು, ಹೊಲಿಗೆ, ಕೈಕಸೂತಿ ಮತ್ತು ಚಿತ್ರಕಲೆ ತರಬೇತಿ ಶಾಲೆಗಳನ್ನು ಸ್ಥಾಪಿಸುವುದು, ವಿಷಯ ತಜ್ಞರಿಂದ ಸಂಬಂಧಪಟ್ಟ ವಿಷಯಗಳ ಬಗ್ಗೆ ಅರಿವು ಮೂಡಿಸುವುದು.

15. ಪ್ರತಿ ವರ್ಷ ರಾಷ್ಟ್ರೀಯ ಮತ್ತು ನಾಡಹಬ್ಬಗಳಾದ ಅಂಬೇಡ್ಕರ್ ಜಯಂತಿ, ಸ್ವಾತಂತ್ರ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಗಣ ರಾಜ್ಯೋತ್ಸವ ಮೊದಲಾದ ಹಬ್ಬಗಳನ್ನು ಆಚರಿಸುವುದು.

16. ಬಾಲಕಾರ್ಮಿಕ ಪದ್ಧತಿಯನ್ನು, ಸಮಾಜದಲ್ಲಿನ ಮೂಢ ನಂಬಿಕೆ, ಜಾತಿ ನಂಬಿಕೆ ಮೊದಲಾದ ಸಮಾಜಿಕ ಪಿಡಗುಗಳ ನಿರ್ಮೂಲನೆ ಮಾಡಲು ಶ್ರಮಿಸುವುದು. ಪುನಃಶ್ಚೇತನ ವಸತಿ ಕೇಂದ್ರಗಳನ್ನು ಸ್ಥಾಪಿಸುವುದು.

17. ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

5. ಸಂಘದಲ್ಲಿ ಉತ್ಪತ್ತಿಯಾಗುವ ಹಣವನ್ನು ಸಂಘದ ಅಭಿವೃದ್ಧಿಗಾಗಿ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.

6. ಈ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗೂ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಗಿದೆ.

1. [signature]
2. [signature]
3. [signature]
4. [signature]
5. [signature]
6. [signature]
7. Ravi
8. [signature]
9. Sanya
10. [signature]

ಸಂಘದ ಹೆಸರು: ಅವ್ಯಾಬ್ಯು ಅಸೋಸಿಯೇಷನ್ ಆಫ್ ಎಸ್.ಜೆ.ಬಿ.ಐ.ಟಿ
ದಾಖಲೆಗಳ ವಿವರ: ಜ್ಞಾಪನಾ ಪತ್ರ
ಸ್ವೀಕರಿಸಿದ ದಿನಾಂಕ: 16/12/10
ನೋಂದಣೆ ಸಂಖ್ಯೆ: 1103/10-11
ರಿಜಿಸ್ಟ್ರಾರ್‌ನಲ್ಲಿನ ಕ್ರಮಸಂಖ್ಯೆ: 1103/10-11
ವಿಲೇಯಾದ ವಿವರ: ನೋಂದಾಯಿಸಿದೆ.
ದಿನಾಂಕ: 28-12-2010.

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲೆ

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

ಈ ದಸ್ತಾವೇಜು ಸಂಖ್ಯೆ 1103/10-11 ರ ಪುಟ ಸಂಖ್ಯೆ 06

## ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ

ಎಸ್ ಜೆ ಬಿ ಇನ್ಸ ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬಿ.ಜಿ.ಎಸ್.ಹೆಲ್ತ್ ಅಂಡ್ ಎಜುಕೇಷನ್ ಸಿಟಿ, ಉತ್ತರಹಳ್ಳಿ ರೋಡ್, ಕೆಂಗೇರಿ, ಬೆಂಗಳೂರು-560 060.

### ಕಾರ್ಯಕಾರಿ ಸಮಿತಿ ಸದಸ್ಯರುಗಳ ಪಟ್ಟಿ.

| ಕ್ರ.ಸಂಃ | ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀಯುತರಾದ :- | ವಯಸ್ಸು | ಉದ್ಯೋಗ | ಪದವಿ | ರುಜು |
|---|---|---|---|---|---|
| 01. | ಡಾಃ ಪುಟ್ಟರಾಜು<br>ನಂ.319, ಬಿ.ಇ.ಎಂ.ಎಲ್.7ನೇ ಸ್ಟೇಜ್,<br>ಮೈಲಸಂದ್ರ, ಕೆಂಗೇರಿ, ಬೆಂಗಳೂರು-60. | 48 | ಪ್ರಿನ್ಸಿಪಾಲ್ | ಅಧ್ಯಕ್ಷರು | [signature] |
| 02. | ಮೋಹನ್.ಹೆಚ್.ಎಸ್.<br>ನಂ.112, 3ನೇ ಕ್ರಾಸ್, ಕವಿಕಾ ಬಡಾವಣೆ,<br>ಕಾರ್ಡ್ ರಸ್ತೆ, ಬೆಂಗಳೂರು-26. | 35 | ಸರ್ವೀಸ್ | ಉಪಾಧ್ಯಕ್ಷರು | [signature] |
| 03. | ಅಭಯ ದೇಶಪಾಂಡೆ<br>ಉಗಾರ್‌ಕುರ್ದ್, ಅಥಣಿ ತಾಃ,<br>ಬೆಳಗಾಂ ಜಿಲ್ಲೆ. | 25 | ಸರ್ವೀಸ್ | ಪ್ರಧಾನ ಕಾರ್ಯದರ್ಶಿ | [signature] |
| 04. | ವೇದ.ಎಸ್.<br>ನಂ.412, WS, 7ನೇ ಮೈನ್,<br>3ನೇ ಬಿ ಕ್ರಾಸ್, ಕೆಂಗೇರಿ,<br>ಬೆಂಗಳೂರು. | 24 | ಸರ್ವೀಸ್ | ಜಂಟಿ ಕಾರ್ಯದರ್ಶಿ | Veda |
| 05. | ಪ್ರದೀಪ್..ಕೆ.<br>ನಂ.28, ಹಳೆ ನಂ.102, 2ನೇ ಮೈನ್,<br>ಮೆಟ್ರೋ ಲೇಔಟ್, ನಾಯಂಡನಹಳ್ಳಿ,<br>ಬೆಂಗಳೂರು-39. | 25 | ಸರ್ವೀಸ್ | ಸಹ ಕಾರ್ಯದರ್ಶಿ | [signature] |
| 06. | ವಿಜಯಕುಮಾರ್<br>ನಂ.31/8, 12ನೇ ಮೈನ್, ವಿಜಯನಗರ,<br>ಬೆಂಗಳೂರು-40. | 38 | ಸರ್ವೀಸ್ | ಖಜಾಂಚಿ | [signature] |
| 07. | ರವಿಕುಮಾರ್<br>ನಂ.245/1, ಲಲಿತ ನಿವಾಸ, 3ನೇ ಮೈನ್,<br>2ನೇ ಬ್ಲಾಕ್, ಟಿ.ಆರ್.ನಗರ, ಬೆಂಗಳೂರು-28. | 30 | ಸರ್ವೀಸ್ | ಸದಸ್ಯರು | Ravi |
| 08. | ಕಿರಣ್.ಪಿ.<br>ನಂ.15, 3ನೇ ಕ್ರಾಸ್, ಅಶೋಕನಗರ,<br>ಬಿ.ಎಸ್.ಕೆ.1ನೇ ಸ್ಟೇಜ್, 2ನೇ ಬ್ಲಾಕ್,<br>ಬೆಂಗಳೂರು-60. | 25 | ಸರ್ವೀಸ್ | ಸದಸ್ಯರು | [signature] |
| 09. | ಸತ್ಯನಾರಾಯಣ.ವೈ.<br>ನಂ.9, ಕೆಂಗೇರಿ ಸ್ಯಾಟಲೈಟ್ ಟೌನ್,<br>ಬೆಂಗಳೂರು-60. | 25 | ಸರ್ವೀಸ್ | ಸದಸ್ಯರು | Satya |
| 10. | ಟಿ.ಎಸ್.ಅಬಿಶೇಖ್<br>ನಂ.199, ರಂಗನಾಥ, 9ನೇ ಕ್ರಾಸ್,<br>1ನೇ ಬ್ಲಾಕ್, ಬಿಕಾಸಿಪುರ, ಬೆಂಗಳೂರು. | 23 | ಸರ್ವೀಸ್ | ಸದಸ್ಯರು | [signature] |

| ಸಾಕ್ಷಿಗಳುಃ ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ರುಜು |
|---|---|---|---|
| JAYADEV | 42 | | |

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060

# ಸಂಘದ ನಿಯಮ ನಿಬಂಧನೆಗಳು

ಈ ನಿಬಂಧನೆಗಳು ಸಂಘದ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವ ಉದ್ದೇಶದಿಂದ ರಚಿಸಲ್ಪಟ್ಟಿರುತ್ತವೆ.

1. ಸಂಘದ ಹೆಸರು : ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ.
2. ಸಂಘದ ವಿಳಾಸ : ಎಸ್ ಜೆ ಬಿ ಇನ್ಸ ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬಿ.ಜಿ.ಎಸ್.ಹೆಲ್ತ್ ಅಂಡ್ ಎಜುಕೇಷನ್ ಸಿಟಿ, ಉತ್ತರಹಳ್ಳಿ ರೋಡ್, ಕೆಂಗೇರಿ, ಬೆಂಗಳೂರು-560 060.

3. ಸಂಘದ ಸದಸ್ಯತ್ವ:-

1) ಸಂಘದ ಸದಸ್ಯತ್ವ ಪಡೆಯಲು ಭಾರತ ಒಪ್ಪಂದ ಕಾಯ್ದೆ ರೀತ್ಯಾ ಅರ್ಹತೆ ಹೊಂದಿರಬೇಕು.
2) 18 ವರ್ಷ ಮೇಲ್ಪಟ್ಟು ಸಂಘದ ಧ್ಯೇಯೋದ್ದೇಶಗಳನ್ನು ಒಪ್ಪಿರಬೇಕು.
3) ಸದಸ್ಯತ್ವದ ಅರ್ಜಿ ನಮೂನೆ ಭರ್ತಿ ಮಾಡಿ ಸಲ್ಲಿಸಬೇಕು.
4) ಸದಸ್ಯತ್ವ ಅರ್ಜಿ ಶುಲ್ಕ ಮತ್ತು ನಿಗದಿತ ಪ್ರವೇಶ ಶುಲ್ಕ ಪಾವತಿ ಮಾಡಬೇಕು.
5) ಸದಸ್ಯತ್ವದ ಅರ್ಜಿ ಜೊತೆ ವಿಳಾಸ ದೃಡೀಕರಣ ಮತ್ತು ಭಾವಚಿತ್ರ ಲಗತ್ತಿಸಬೇಕು.
6) ಸಂಘದ ಕಾರ್ಯವ್ಯಾಪ್ತಿಯ ಕಾರ್ಯಪ್ರದೇಶದಲ್ಲಿ ವಾಸಿಸುತ್ತಿರಬೇಕು.
7) ಎಸ್‌ಜೆಬಿಐಟಿ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದಂತಹ ಮತ್ತು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರೂ ಸಂಘದ ಸದಸ್ಯತ್ವವನ್ನು ಪಡೆಯಬಹುದಾಗಿರುತ್ತದೆ.
7) ಸಂಘದ ಸದಸ್ಯತ್ವವು ಈ ಕೆಳಕಂಡ ವರ್ಗಗಳಿಂದ ಕೂಡಿರುತ್ತದೆ:
   1) ಅಜೀವ ಸದಸ್ಯತ್ವ ರೂ.500-00ರ ಕ್ಕಿಂತ ಹೆಚ್ಚು ಹಣ ನೀಡಿದವರನ್ನು ಸಂಘದ ಅಜೀವ ಸದಸ್ಯರನ್ನಾಗಿ ಮಾಡಿಕೊಳ್ಳುವುದು.
   2) ಪ್ರವೇಶ ದನ ರೂ.5-00.

4. ಸದಸ್ಯತ್ವ ಅನುಮೋದನೆ ಅಥವಾ ನಿರಾಕರಣೆ: -

1) ಸದಸ್ಯತ್ವ ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಶುಲ್ಕ ಪಾವತಿಸಿ ಸಲ್ಲಿಸಿದ ಮೇಲೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಿದ ನಂತರ ಸದಸ್ಯತ್ವ ಅಂಗೀಕಾರವೆಂದು ಪರಿಗಣಿಸತಕ್ಕದ್ದು.

2) ಸದಸ್ಯತ್ವ ನಿರಾಕರಣೆ ಕುರಿತು ಅರ್ಜಿದಾರರಿಗೆ ಸಕಾರಣಗಳನ್ನು 60 ದಿವಸದೊಳಗಾಗಿ ತಿಳಿಸತಕ್ಕದ್ದು.

3) ಸದಸ್ಯತ್ವ ನಿರಾಕರಣೆ ಕುರಿತು ಹಿಂಬರಹ ನೀಡಿದ 60 ದಿವಸದೊಳಗಾಗಿ ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡತಕ್ಕದ್ದು.

4) ಅವಧಿ ಮುಗಿದ ನಂತರ ಮೇಲ್ಮನವಿ ಅರ್ಜಿ ಪರಿಗಣಿಸಿ ಅರ್ಹತೆ ಹೊಂದಿರತಕ್ಕದ್ದಲ್ಲ. ಸರ್ವ ಸದಸ್ಯರ ಸಭೆಯ 30 ದಿವಸಗಳ ಮೊದಲು ಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿರುತ್ತದೆ.

5) ಏಪ್ರಿಲ್ ನಿಂದ ಮಾರ್ಚ್ ಅಂತ್ಯದವರೆಗೆ ಸಾಮಾನ್ಯ ಸದಸ್ಯರ ಅವಧಿ ಇದ್ದು, ನಡುವೆ ಯಾವಾಗ ಸದಸ್ಯರಾದರು ಸಹ ಆ ವರ್ಷಕ್ಕೆ ಸೇರುತ್ತದೆ.

5. ಸದಸ್ಯರ ಹಕ್ಕು ಬಾಧ್ಯತೆಗಳು: -

1) ಸಂಘದ ಸದಸ್ಯತ್ವ ಅಂಗೀಕಾರವಾದ ದಿನದಿಂದ ಸಂಘವು ಕೈಗೊಳ್ಳುವ ಎಲ್ಲಾ ಸಾಮಾನ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವಿರುತ್ತದೆ.

2) ಸಂಘ/ಸಂಸ್ಥೆಯ ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆಂದು ಕಂಡುಬಂದಲ್ಲಿ 07 ದಿವಸಗಳ ಮುಂಚಿತವಾಗಿ ನೋಟೀಸನ್ನು ಜಾರಿಗೊಳಿಸಿ, ವಿವರಣೆ ಪಡೆದು ಕಾರ್ಯಕಾರಿ ಸಮಿತಿಯಲ್ಲಿ ಬಹುಮತದ ಮೇಲೆ ಸದಸ್ಯತ್ವವನ್ನು ಸಕಾರಣಗಳನ್ನು ನೀಡಿ ವಜಾ ಮಾಡಬಹುದು. ಇಂತಹ ಸದಸ್ಯರು ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿರುತ್ತದೆ.

3) ಸಂಘದ ಎಲ್ಲಾ ವರ್ಗದ ಸದಸ್ಯರುಗಳಿಗೆ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವ ಸ್ಪರ್ಧಿಗಳು ಮತ ಚಲಾಯಿಸುವ ಅಧಿಕಾರವಿರುತ್ತದೆ.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

6) ಸದಸ್ಯತ್ವ ನಿಂತು ಹೋಗುವುದು:-

ಮರಣ ಹೊಂದಿದರೆ, ಬುದ್ಧಿ ಭ್ರಮಣೆಯಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ, ರಾಜೀನಾಮೆ ಕೊಟ್ಟರೆ, ಕಾನೂನು ಪ್ರಕಾರ ಅನರ್ಹ ವ್ಯಕ್ತಿಯಂದು ಘೋಷಿಸಲ್ಪಟ್ಟಲ್ಲಿ, 3 ತಿಂಗಳುಗಳ ಅವಧಿಗೆ ಮೇಲ್ಪಟ್ಟು ಚಂದಾ ಹಣ ಬಾಕಿ ಇದ್ದಲ್ಲಿ, ಸಂಘದ ಉದ್ದೇಶಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಕಂಡುಬಂದರೆ ಸಂಘದ ಸದಸ್ಯತ್ವ ರದ್ದಾಗುವುದು.

7) ಸದಸ್ಯತ್ವ ವಹಿ (ರಿಜಿಸ್ಟರ್): -

ಸದಸ್ಯರ ಹೆಸರು, ವಿಳಾಸ, ವಯಸ್ಸು, ಉದ್ಯೋಗ, ಸದಸ್ಯತ್ವದ ದಿನಾಂಕ, ಸದಸ್ಯರ ಫೋಟೋ, ಇತ್ಯಾದಿ ವಿವರಗಳನ್ನು ನಮೂದಿಸಿರುವ ಸದಸ್ಯತ್ವದ ವಹಿಯಲ್ಲಿ ಕಡ್ಡಾಯವಾಗಿ ಸಂಸ್ಥೆಯಲ್ಲಿ ನಿರ್ವಹಿಸತಕ್ಕದ್ದು ಮತ್ತು Up date ಮಾಡತಕ್ಕದ್ದು.

8) ಕಾರ್ಯಕಾರಿ ಸಮಿತಿ ಅವಧಿ: -

1) ಕಾರ್ಯಕಾರಿ ಸಮಿತಿಯ ಅವಧಿ **05** ವರ್ಷಗಳಾಗಿರತಕ್ಕದ್ದು.

2) ವರ್ಷದ ಯಾವುದೇ ಮಾಹೆಯಲ್ಲಿ ಕಾರ್ಯಕಾರಿ ಸಮಿತಿ ಆಸ್ತಿತ್ವಕ್ಕೆ ಬಂದರೂ ಸದರಿ ಅವಧಿಯನ್ನು ವರ್ಷವೆಂದು ಪರಿಗಣಿಸತಕ್ಕದ್ದು.

3) ಸಂಘದ ಆಡಳಿತ ಮತ್ತು ಹಣಕಾಸಿನ ವರ್ಷ ಏಪ್ರಿಲ್ 01 ರಿಂದ ಮಾರ್ಚ್ 31ರವರೆಗೆ ಇರುತ್ತದೆ.

9) ಕಾರ್ಯಕಾರಿ ಸಮಿತಿಯ ಆಯ್ಕೆ: -

1) ಸಂಘದ ಒಟ್ಟು ಅರ್ಹ ಸದಸ್ಯರಲ್ಲಿ **10** ಜನ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಗುಪ್ತ ಮತದಾನದ ಮೂಲಕ ಆಯ್ಕೆ ಮಾಡಿಕೊಳ್ಳತಕ್ಕದ್ದು.

2) ಚುನಾವಣಾಧಿಕಾರಿಯಾಗಿ ಹಿರಿಯ ಸದಸ್ಯರನ್ನೊಬ್ಬರನ್ನು ಅಥವಾ ಹೊರಹೋಗುತ್ತಿರುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿದ ಮತ್ತು ಕಾನೂನಿನ ಬಗ್ಗೆ ತಿಳುವಳಿಕೆ ಇರುವ ವ್ಯಕ್ತಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿಕೊಳ್ಳಬಹುದು.

3) ಚುನಾವಣೆಯ 3 ತಿಂಗಳ ಮೊದಲು ಸುಸ್ತಿ ಸದಸ್ಯರ ಪಟ್ಟಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳು ಪ್ರಕಟಿಸಬೇಕು ಮತ್ತು ಸದರಿ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸುಸ್ತಿ ಹಣ ಪಾವತಿಸಬೇಕು. ಅವಧಿ ಮುಗಿದ ಒಂದು ವಾರದೊಳಗಾಗಿ ಅರ್ಹ ಮತದಾರ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಈ ಬಗ್ಗೆ ಸಂಘದ ಎಲ್ಲಾ ಸದಸ್ಯರಿಗೆ ತಿಳುವಳಿಕೆ ನೀಡಬೇಕು.

4) ಕಾರ್ಯಕಾರಿ ಸಮಿತಿಯ ಅವಧಿಯ ಮುಗಿಯುವ 4 ತಿಂಗಳು ಮೊದಲೇ ಚುನಾವಣೆ ದಿನಾಂಕ ನಿಗಧಿಪಡಿಸಿ, ಸಂಘಗಳ ನೋಂದಣಾಧಿಕಾರಿಗಳಿಗೆ ದಿನಾಂಕ ತಿಳಿಸಬೇಕು.

5) ಚುನಾವಣೆಯ ದಿನಾಂಕ್ಕಿಂತ ಮೂರು ತಿಂಗಳು ಮೊದಲು ಯಾವುದೇ ವ್ಯಕ್ತಿಯನ್ನು ಸಂಘಕ್ಕೆ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ.

6) ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಯಾರೊಬ್ಬರು ರಾಜೀನಾಮೆ ಸಲ್ಲಿಸಿದರೆ, ಮರಣ ಹೊಂದಿದರೆ, ಇನ್ನಿತರ ಕಾರಣಗಳಿಂದ ತೆರವಾದರೆ ಅಂತಹ ಕಾರ್ಯಕಾರಿ ಸಮಿತಿಯ ಸದಸ್ಯರ ಸ್ಥಾನಕ್ಕೆ ಮತ್ತೊಬ್ಬರನ್ನು ಕೋ-ಆಪ್ಟ್ ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು.

7) ಕಾರ್ಯಕಾರಿ ಸಮಿತಿ ಸಭೆಗೆ ಸತತವಾಗಿ ಗೈರು ಹಾಜರಾದರೆ ತಿಳುವಳಿಕೆ ನೀಡಿದ ನಂತರವೂ 4 ಕಾರ್ಯಕಾರಿ ಸಮಿತಿಗೆ ಸಭೆಗೆ ಗೈರು ಹಾಜರಿ ಆದರೆ ಅಂತಹರವನ್ನು ಕಾರ್ಯಕಾರಿ ಸಮಿತಿ ಸಭೆಯಿಂದ ಅನರ್ಹಗೊಳಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತ್ತಕ್ಕದ್ದು ಮತ್ತು ಸದ್ಯದಲ್ಲೇ ಕೋ-ಆಪ್ಟ್ ಮಾಡಿಕೊಳ್ಳಬಹುದು.

8) ಆಯ್ಕೆಯಾದ ಕಾರ್ಯಕಾರಿ ಸಮಿತಿಯ ಅವಧಿಯ ಕೊನೆಯ ದಿನದ ಮಧ್ಯಾಹ್ನ ಅಥವಾ ಅವಧಿಯ ಮೊದಲದ ದಿನದ ಪೂರ್ವಾಹ್ನದಂದು ಅಧಿಕಾರ ವಹಿಸಿಕೊಳ್ಳಬೇಕು.

Principal
SJB Institute of Technology
# 67, BGS Health & Education City
Dr. Vishnuvardhan Road,
Kengeri, Bengaluru - 560 060.

10) ಪಧಾಧಿಕಾರಿಗಳ ಆಯ್ಕೆ: -

1) ಕಾರ್ಯಕಾರಿ ಸಮಿತಿಯಲ್ಲಿ ಅಧಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಖಜಾಂಚಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳು ಇರತಕ್ಕದ್ದು.

2). ಕಾರ್ಯಕಾರಿ ಸಮಿತಿಯ ಚುನಾವಣೆಯ ದಿನದಿಂದ ಒಂದು ವಾರದೊಳಗೆ ಪದಾಧಿಕಾರಿಗಳ ಆಯ್ಕೆಯನ್ನು ಕೈ ಎತ್ತುವುದರ ಮೂಲಕ ಅಥವಾ ಗುಪ್ತ ಮತದಾನದ ಮೂಲಕ ಆಯ್ಕೆ ಮಾಡಿಕೊಳ್ಳತಕ್ಕದ್ದು.

3) ಪದಾಧಿಕಾರಿಗಳ ಆಯ್ಕೆಯನ್ನು ಪದಾಧಿಕಾರಿಗಳ ಚುನಾವಣೆಗೆ ಸ್ಪರ್ಧಿಸದ ಹಿರಿಯ ಸದಸ್ಯರನ್ನು ಅದೇ ದಿನ ಚುನಾವಣಾಧಿಕಾರಿಯಾಗಿ ನೇಮಿಸಿಕೊಂಡು ಪದಾಧಿಕಾರಿಗಳ ಆಯ್ಕೆ ಕ್ರಮವನ್ನು ನಿರ್ವಹಿಸುವುದು. ಈ ಪ್ರಕ್ರಿಯೆಗೆ ಅವರೇ ಅಂದಿನ ಸಭೆಯ ಅಧ್ಯಕ್ಷರಾಗಿರುತ್ತಾರೆ.

11. ಕಾರ್ಯಕಾರಿ ಸಮಿತಿಯ ಜವಾಬ್ದಾರಿಗಳು: -

1) ಸಂಘದ ಆಡಳಿತವನ್ನೆಲ್ಲಾ ರಚಿತವಾದ ಕಾರ್ಯಕಾರಿ ಸಮಿತಿ ನಡೆಸತಕ್ಕದ್ದು, ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿಯು ಸಂಘದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

2) ಕನಿಷ್ಟ ಪಕ್ಷ ಪ್ರತಿ 3 ತಿಂಗಳಿಗೊಮ್ಮೆ ಕಾರ್ಯಕಾರಿ ಸಮಿತಿ ಸಭೆ ನಡೆಸತಕ್ಕದ್ದು.

3) ಕಾರ್ಯಕಾರಿ ಸಮಿತಿಯ ಸಭೆಯ ನೋಟೀಸನ್ನು ವಿಷಯಸೂಚಿಯೊಡನೆ ಕನಿಷ್ಟ 7 ದಿವಸ ಮುಂಚಿತವಾಗಿ ಆರ್‌ಪಿಎಡಿ ಅಥವಾ ಮುದ್ದಾಂ ಮೂಲಕ ಕಳುಹಿಸಿ ಸ್ವೀಕೃತಿ ಪಡೆಯತಕ್ಕದ್ದು.

4) ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಿದ ಅಂಶಗಳನ್ನು ನಡವಳಿ ಪುಸ್ತಕದಲ್ಲಿ ನಮೂದಿಸತಕ್ಕದ್ದು.

5) ಸಂಘದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಅಗತ್ಯ ಯೋಜನೆಗಳನ್ನು ರೂಪಿಸಿಕೊಳ್ಳುವುದು.

6) ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಪ್ಪದೆ ಈ ಹಿಂದಿನ ಮಾಹೆಗಳ ಜಮಾ-ಖರ್ಚು ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯಬೇಕು.

7) ಸಂಘದ ಯಾವುದೇ ಹಣಕಾಸಿನ ಠೇವಣಿ, ಖರ್ಚು ಇತ್ಯಾದಿಗಳ ಬಗ್ಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆಯದ ಹೊರತು ವಿನಿಯೋಗಿಸುವುದಾಗಲೀ ಅಥವಾ ಖರ್ಚು ಮಾಡತಕ್ಕದ್ದಲ್ಲ.

8) ಸಂಘಕ್ಕೆ ಬರುವ ಯಾವುದೇ ಹಣಕಾಸಿನ ಸ್ವೀಕೃತಿ ಮತ್ತು ಖರ್ಚಿನ ಬಾಬ್ತನ್ನು ನಗದು ಪುಸ್ತಕದಲ್ಲಿ ನಮೂದಿಸಿ ನಿರ್ವಹಿಸಬೇಕು.

9) ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸದಸ್ಯರು ಕೋರಂ ಇರತಕ್ಕದ್ದು, ಅಗತ್ಯಕ್ಕಿಂತ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಜರಿರದಿದ್ದಲ್ಲಿ ಮುಂದಿನ ದಿನಕ್ಕೆ ಸಭೆಯನ್ನು ಮುಂದೂಡತಕ್ಕದ್ದು. ಮೂಂದೂಡಿದ ಸಭೆಗೆ ಕೋರಂ ಅಗತ್ಯ ಇರುವುದಿಲ್ಲ.

10) ಸಂಸ್ಥೆಯ ವಿಳಾಸ, ನೋಂದಣಿ ಸಂಖ್ಯೆ ಹಾಗೂ ಕಛೇರಿ ವೇಳೆಯನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

11) ಕಾರ್ಯಕಾರಿ ಸಮಿತಿಯು ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ, ಸದಸ್ಯರಿಂದ, ದಾನಿಗಳಿಂದ, ಸರ್ಕಾರ, ಸರ್ಕಾರೇತರ ಸಂಸ್ಥೆಗಳಿಂದ, ಬ್ಯಾಂಕುಗಳಿಂದ ದನ ಸಹಾಯ, ಕೊಡುಗೆ, ಸಾಲ, ಅನುದಾನ ಇತ್ಯಾದಿಗಳನ್ನು ಸ್ವೀಕರಿಸುವ ಅಧಿಕಾರ ಇರುತ್ತದೆ. ಆದರೆ ಪ್ರತಿಯೊಂದು ವಿಭಾಗಕ್ಕೆ ಪ್ರತ್ಯೇಕವಾಗಿ ವಹಿಯನ್ನು (ರಿಜಿಸ್ಟರ್) ನಿರ್ವಹಿಸತಕ್ಕದ್ದು, ಇದು ಸಂಸ್ಥೆಯ ನಗದು ಪುಸ್ತಕದಲ್ಲಿ ಜಮಾ-ಖರ್ಚು ತಃಖ್ತೆಯಲ್ಲಿ ಹಾಗೂ ಆಸ್ತಿ ಮತ್ತು ಋಣ ತಃಖ್ತೆಯಲ್ಲಿ ತಪ್ಪದೇ ನಮೂದಿಸತಕ್ಕದ್ದು.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

12) ಸಂಘದ ಕಾರ್ಯವ್ಯಾಪ್ತಿಯಲ್ಲಿ ಮಾತ್ರ ಸಂಘದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು, ಸಂಘಗಳ ನೋಂದಣಾಧಿಕಾರಿಗಳ ಅನುಮತಿ ಪಡೆದು ರಾಜ್ಯದ ಇತರ ಪ್ರದೇಶಗಳಲ್ಲಿ ಕಾರ್ಯಚಟುವಟಿಕೆ/ ಉದ್ದೇಶದ ಈಡೇರಿಕೆಗೆ ನೆರವು ಪಡೆಯಬಹುದು.

13) ಸಂಘದ ಕಾರ್ಯವ್ಯಾಪ್ತಿಯಲ್ಲಿ ಮಾತ್ರ ಕಾರ್ಯ ಚಟುವಟಿಕೆಗಳನ್ನು ನಡೆಸತಕ್ಕದ್ದು.

14). ಸಂಘದ ಧ್ಯೇಯೋದ್ದೇಶಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರದಿಂದಾಗಲಿ, ಕೇಂದ್ರ ಸರ್ಕಾರದಿಂದಾಗಲಿ, ಇನ್ನಿತರೆ ಸಂಘ ಸಂಸ್ಥೆಗಳಿಂದಾಗಲಿ, ಅನುದಾನ ಸ್ವೀಕರಿಸಬಹುದು ಹಾಗೂ ಯಾವುದೇ ಹಣಕಾಸು ಸಂಸ್ಥೆಗಳಿಂದ, ರಾಷ್ಟ್ರೀಕೃತ, ಸಹಕಾರಿ, ಷಡ್ಯೂಲ್ಡ್ ಬ್ಯಾಂಕುಗಳಿಂದಾಗಲಿ ಮಹಿಳಾ ಕೋಷ ಸಂಸ್ಥೆಯಿಂದಾಗಲಿ ಸಾಲ ಸೌಲಭ್ಯಗಳನ್ನು ಪಡೆಯಬಹುದಾಗಿರುತ್ತದೆ ಹಾಗೂ ಸಂಘವು ಖಾಸಗಿ ಡುವರಿಂದ, ಸರ್ಕಾರ ದಿಂದಾಗಲೀ ಸ್ಥಿರಾಸ್ತಿಯನ್ನು ಖರೀದಿಗಾಗಲಿ, ಧಾನವಾಗಲಿ, ಭೋಗ್ಯಕ್ಕಾಗಲಿ ಅಥವಾ ಬಾಡಿಗೆಗಾಗಿ ಪಡೆಯಬಹುದಾಗಿರುತ್ತದೆ.

15). ಕಾರ್ಯಕಾರಿ ಸಮಿತಿಯು ಸಂಘದ ಉದ್ದೇಶಗಳ ಈಡೇರಿಕೆಗಾಗಿ ಸದಸ್ಯರಿಂದ, ದಾನಿಗಳಿಂದ, ಹಣಕಾಸು, ಖಾಸಗಿ, ಸರ್ಕಾರಿ, ಸರ್ಕಾರೇತರ ಸಂಸ್ಥೆಗಳಿಂದ, ಬ್ಯಾಂಕುಗಳಿಂದ ನೆರವು, ಧನಸಹಾಯ, ಕೊಡುಗೆ, ಸಾಲ, ಅನುದಾನ ಇತ್ಯಾದಿಗಳನ್ನು ಸ್ವೀಕರಿಸುವ ಅಧಿಕಾರ ಇರುವುದು.

12. ವಿಶೇಷ ಸರ್ವ ಸದಸ್ಯರ ಸಭೆಃ -

**ಜ್ಞಾಪನ/ಧ್ಯೇಯೋದ್ದೇಶಗಳು/ನಿಯಮ ನಿಬಂಧನೆ/ತಿದ್ದುಪಡಿ ಃ -**

ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 9, 10, 21, 22 ಮತ್ತು 23ನೇ ಪ್ರಕಾರ ಧ್ಯೇಯೋದ್ದೇಶಗಳನ್ನು, ನಿಬಂಧನೆಗಳನ್ನು, ತಿದ್ದುಪಡಿ ಮಾಡಿಕೊಳ್ಳುವುದು, ನಿಯಮಾನುಸಾರ ವಿಶೇಷ ಸದಸ್ಯರ ಸಭೆ ಕರೆಯುವ 21 ದಿವಸಗಳ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ವಿಷಯ ಸೂಚಿ ಮತ್ತು ಅಗತ್ಯ ತಿದ್ದುಪಡಿ ಮಾಡಲು ಉದ್ದೇಶಿಸಿರುವ ವಿವರಗಳನ್ನು ಅಂಚೆ ಧೃಡೀಕರಣದ ಮೂಲಕ ಜಾರಿಗೊಳಿಸಬೇಕು. ನಿಬಂಧನೆಗಳಾಗಲೀ ಅಥವಾ ಉಪ ನಿಬಂಧನೆಗಳಾಗಲೀ ಇವುಗಳಿಗೆ ವಿರೋಧವಿಲ್ಲದಂತೆ ರಚಿಸಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರವು ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದಾಗ 1/3 ಭಾಗದಷ್ಟು ಸದಸ್ಯರು ಒಪ್ಪಿಗೆ ಕೊಟ್ಟಾಗ ಅಂತಹವುಗಳನ್ನು ತಿದ್ದುಪಡಿ ಮಾಡಬಹುದು.

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ ರೀತ್ಯಾ ನಡೆಸಿದ ವಿಶೇಷ ಸರ್ವ ಸದಸ್ಯರ ಸಭೆಯ ದಿನಾಂಕದಿಂದ 30 ದಿವಸಗಳೊಳಗಾಗಿ ಸಂಘಗಳ ನೋಂದಣಾಧಿಕಾರಿಗಳ ಅನುಮೋದನೆ ದೊರೆತ ದಿನಾಂಕದಿಂದ ಉದ್ದೇಶಿತ ತಿದ್ದುಪಡಿ ಜಾರಿಗೆ ಬರುವುದು.

13. ಸರ್ವ ಸದಸ್ಯರ ಸಭೆಃ -

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ ಕಲಂ 1960ರ ಪ್ರಕಾರ ಪ್ರತಿವರ್ಷ ಸರ್ವ ಸದಸ್ಯರ ಸಭೆಯನ್ನು ನಡೆಸಬೇಕು. ಸರ್ವ ಸದಸ್ಯರ ಸಭೆಗೆ 21 ದಿವಸಗಳ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಸಭೆಯ ವಿಷಯ ಸೂಚಿಯೊಡನೆ ನೋಟೀಸ್ ಅಂಚೆ ದೃಢೀಕರಣ ಪತ್ರದ ಮೂಲಕ ಜಾರಿಗೊಳಿಸುವುದು. ಸರ್ವ ಸದಸ್ಯರ ಸಭೆಯಲ್ಲಿರುವ ವಿಷಯ ಸೂಚನೆಗಳ ಬಗ್ಗೆ ಪ್ರಶ್ನೆ ಮಾಡುವ ಸದಸ್ಯರುಗಳ ತಾವು ಕೇಳುವ ಪ್ರಶ್ನೆಗಳ ವಿವರ ಇತ್ಯಾದಿಗಳನ್ನು ಸರ್ವ ಸದಸ್ಯರ ಸಭೆಯ 10 ದಿವಸಗಳ ಮೊದಲು ಸಂಘದ ಕಾರ್ಯದರ್ಶಿಗೆ ನೀಡಿ ಸ್ವೀಕೃತಿ ಪಡೆಯಬೇಕು. ಪ್ರತಿಯೊಂದು ಸರ್ವ ಸದಸ್ಯರ ಸಭೆಯಲ್ಲಿ 2/3 ಭಾಗದಷ್ಟು ಸದಸ್ಯರಿಗೆ ಕಡಿಮೆ ಇಲ್ಲದೆ ಹಾಜರಿರಬೇಕು. ಯಾವ ಸಭೆಯಲ್ಲಿಯೇ ಆಗಲೀ ಕ್ಲುಪ್ತ ಕಾಲದ ನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾಗದಿದ್ದರೆ ಆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಯ ದಿನ, ಕಾಲ, ವೇಳೆ ಇವುಗಳನ್ನು ಅಧ್ಯಕ್ಷರು ನಿಶ್ಚಯಿಸಿ ತಕ್ಷಣವೇ ತಿಳಿಸತಕ್ಕದ್ದು. ಈ ರೀತಿ ಮುಂದುವರಿದ ಸಭೆಯಲ್ಲಿ ಅವಶ್ಯಕವಾದ ಕೋರಂ ಇಲ್ಲದೆ ಇದ್ದರೂ ಸಭೆಯನ್ನು ನಡೆಸತಕ್ಕದ್ದು. ಮುಂದಿನ ಸಭೆಯಲ್ಲಿ ಹೊಸ ವಿಷಯ ಯಾವುದನ್ನು ಚರ್ಚೆಗೆ ತರತಕ್ಕದ್ದಲ್ಲ.

ಸರ್ವ ಸದಸ್ಯರ ಸಭೆಯಲ್ಲಿ ಸಂಘದ ಈ ಹಿಂದಿನ ವರ್ಷದ ಸಾಧನೆ, ಲೆಕ್ಕಪತ್ರಗಳ ಅನುಮೋದನೆ ಮತ್ತು ಮುಂದಿನ ವರ್ಷದ ಆಯವ್ಯಯ ಯೋಜನೆಗಳ ಬಗ್ಗೆ ಚರ್ಚಿಸುವುದು. ಕಳೆದ ವರ್ಷದ ಅವಧಿಯಲ್ಲಿ ಕಾರ್ಯಕಾರಿ ಸಮಿತಿ ತೆಗೆದುಕೊಂಡ ನಿರ್ಣಯಗಳಿಗೆ ಅನುಮೋದನೆ ಪಡೆಯುವುದು. ಮುಂದಿನ ವರ್ಷದ ಆಯವ್ಯಯ, ಅಂದಾಜು ಪಟ್ಟಿ ಅನುಮೋದನೆ ಪಡೆಯುವುದು.

14. ಲೆಕ್ಕಪತ್ರಗಳ ನಿರ್ವಹಣೆಃ -

1. ಸಂಘದ ಆಡಳಿತ ಮತ್ತು ಹಣಕಾಸು ವರ್ಷವು ಏಪ್ರಿಲ್ 01 ರಿಂದ ಮಾರ್ಚ್ 31 ಇರುತ್ತದೆ.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

2. ಕರ್ನಾಟಕ ಸಂಘಗಳ ನೊಂದಣಿ ಕಾಯಿದೆ 13ರ ರೀತ್ಯಾ ಪ್ರತಿವರ್ಷದ ಲೆಕ್ಕಪರಿಶೋಧನೆಯ ಆರ್ಥಿಕ ತಃಖ್ತೆಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ, ಸರ್ವ ಸದಸ್ಯರ ಸಭೆಯ ನಡವಳಿಯನ್ನು ನಿಗದಿತ ಶುಲ್ಕ ಪಾವತಿಸಿ ಸಂಘಗಳ ನೋಂದಣಾಧಿಕಾರಿಗಳಿಗೆ ನಿಗದಿತ ಸಮಯದಲ್ಲಿ ಸಲ್ಲಿಸುವುದು.

3. ಪ್ರತಿ ವರ್ಷದ ಲೆಕ್ಕ ಪತ್ರಗಳನ್ನು ಸಿದ್ದಪಡಿಸಿ, ಸರ್ವ ಸದಸ್ಯರ ಸಭೆಯ ಅನುಮೋದನೆಗೆ ಮಂಡಿಸುವುದು.

4. ಸಂಘದ ಹೆಸರಿನಲ್ಲಿ ಯಾವುದಾದರೂ ಒಂದು ರಾಷ್ಟ್ರೀಕೃತ ಬ್ಯಾಂಕ್/ಸಹಕಾರ ಬ್ಯಾಂಕಿನಲ್ಲಿ ಎಸ್.ಬಿ. ಖಾತೆಯನ್ನು ತೆರೆದು ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿಯವರ ಜಂಟಿ ಸಹಿಯೊಡನೆ ನಿರ್ವಹಿಸುವುದು.

5. ಸಂಘದ ಸದಸ್ಯರ ವಹಿ, ನಗದು ಪುಸ್ತಕ ಹಾಗೂ ಇತ್ಯಾದಿ ಲೆಕ್ಕಪುಸ್ತಕಗಳ ಲೆಡ್ಜರ್‌ಗಳನ್ನು ನಿರ್ವಹಿಸುವುದು.

6. ಸಂಘದ ಲೆಕ್ಕಪತ್ರಗಳ ವಿವರಣೆ ಯಾವುದಾದರೂ ಬೇಕಾದಲ್ಲಿ ಬೇಕಾದಲ್ಲಿ ಸಂಘದ ಅಧ್ಯಕ್ಷರು/ ಪ್ರಧಾನ ಕಾರ್ಯದರ್ಶಿಯಿಂದ ಸದಸ್ಯರು ಪಡೆಯಬಹುದು.

7. ಕಾರ್ಯಕಾರಿ ಸಮಿತಿಯು ಒಬ್ಬ ಲೆಕ್ಕ ತಪಾಸಣಾಧಿಕಾರಿಯನ್ನು ನೇಮಿಸುವುದು. ಅಂತಹವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಬಾರದು.

8. ಲೆಕ್ಕಪತ್ರಗಳನ್ನು ಲೆಕ್ಕ ತಪಾಸಣಾಧಿಕಾರಿಯನ್ನು ನೇಮಕ ಮಾಡಿ, ಸಂಘದ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಗಳನ್ನು ಪರಿಶೀಲಿಸಿ ಲೆಕ್ಕಪತ್ರಗಳನ್ನು ತಯಾರಿಸುವುದು ಮತ್ತು ಅದನ್ನು ವಾರ್ಷಿಕ ಸಭೆಗೆ ಒಪ್ಪಿಸುವುದು.

9. ಸಂಘದ ಪರವಾಗಿ ಸ್ವೀಕರಿಸುವ ಎಲ್ಲಾ ಹಣಗಳನ್ನು ಸಂಘದ ಹೆಸರಿನಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.

15. ಸಂಘದ ವಿಸರ್ಜನೆಃ -

ಸಂಘವನ್ನು 1960ರ ಕರ್ನಾಟಕ ಸಂಘಗಳ ನೊಂದಣಿ ಕಾಯಿದೆ ಕಲಂ 22 ಮತ್ತು 23ರ ವಿಧಿಗಳನ್ವಯ ಕ್ರಮ ಕೈಗೊಂಡು ವಿಸರ್ಜಿಸಬಹುದು.

16. ಸಂಘದ ಸಂಯೋಜನೆಃ -

ಕರ್ನಾಟಕ ಸಂಘಗಳ ನೊಂದಣಿ ಕಾಯಿದೆಯ 1960ರ ಕಲಂ 21 ರ ವಿಧಿಗಳನ್ವಯ ಕ್ರಮ ಕೈಗೊಂಡು ಬೇರಾವುದೇ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.

17. ಬಂಡವಾಳ ಹೂಡಿಕೆಃ

ಸಂಸ್ಥೆಯ ನಿಧಿಯನ್ನು ಆದಾಯ ತೆರಿಗೆ ವಿದಿ 13(1)(ಡಿ)rws 11(5) ಆದಾಯ ತೆರಿಗೆ 1961ರಂತೆ ಹೂಡಲಾಗುವುದು ಹಾಗೂ ಈ ಕಾಯಿದೆಗೆ ಕಾಲ ಕಾಲಕ್ಕೆ ಬರುವ ತಿದ್ದುಪಡಿಯಂತೆ ಮಾಡಲಾಗುವುದು.

18. ಹಣಕಾಸು ಲೆಕ್ಕಪತ್ರಃ

ಸಂಸ್ಥೆಯ ಎಲ್ಲಾ ಲೆಕ್ಕಪತ್ರಗಳನ್ನು ನಿಯಮಿತವಾಗಿ ಇಡಬೇಕು, ಲೆಕ್ಕಗಳನ್ನು ಅರ್ಹ ಅಡಿಟ್ ರವರಿಂದ ಪ್ರತಿ ವರ್ಷ ಅಡಿಟ್ ಮಾಡಿಸಬೇಕು. ಲೆಕ್ಕಗಳನ್ನು ಪ್ರತಿವರ್ಷ ಮಾರ್ಚ್ 31ರ ಒಳಗೆ ಮುಕ್ತಾಯಗೊಳಿಸಬೇಕು.

19. ತಿದ್ದುಪಡಿಗಳುಃ

ಆದಾಯ ತೆರಿಗೆ ಕಾಯಿಬೆ 1961ರ ವಿಧಿ 2(15), 11, 12 ಮತ್ತು 80(ಜಿ) ಅವಕಾಶಗಳಿಗೆ ವಿರುದ್ಧವಾಗಿ ಯಾವುದೇ ತಿದ್ದುಪಡಿಗಳು ಸಂಸ್ಥೆಯ ಮೇಮೊರಾಂಡಮ್ ಆಫ್ ಅಸೋಸಿಯೇಷನ್, ಬೈಲಾ, ನಿಯಮ ನಿಬಂಧನೆಗಳಿಗೆ ಮಾಡಬಾರದು, ಕಾಲ ಕಾಲಕ್ಕೆ ಆಗುವ ತಿದ್ದುಪಡಿಗಳನ್ನು ಪಾಲಿಸುವುದು. ಯಾವುದೇ ತಿದ್ದುಪಡಿಗಳನ್ನು ಆದಾಯ ತೆರಗೆ ಆಯುಕ್ತರ ಪೂರ್ವಾನುಮತಿಯಿಲ್ಲದೇ ಮಾಡಬಾರದು.

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

ದಸ್ತಾವೇಜುಸಂಖ್ಯೆ......1103/10-11.......ಗುಟಸಂಖ್ಯೆ...11...

20. ವಿಘಟನೆ, ವಿಸರ್ಜನೆ:
ಸಂಸ್ಥೆಯನ್ನು ಒಂದು ವೇಳೆ ಮುಚ್ಚುವುದು ಅಥವಾ ವಿಸರ್ಜನೆ ಮಾಡಬೇಕಾದರೆ ಸಂಸ್ಥೆಯ ಆಸ್ತಿ ಸ್ವತ್ತುಗಳನ್ನು ಯಾವುದೇ ಕಾರಣದಿಂದ ಕಾರ್ಯಕರಿ ಸಮಿತಿಯ ಸದಸ್ಯರಾಗಲೀ ಅಥವಾ ಯಾರಿಗೆ ಆಗಲಿ ವಿತರಿಸತಕ್ಕದ್ದಲ್ಲ, ಆದರೆ ಅಂತಹುದೇ ಉದ್ದೇಶವುಳ್ಳ ಯಾವುದೇ ಸಂಸ್ಥೆಯು 80(ಜಿ) ಆದಾಯ ತೆರಿಗೆ ಇಲಾಖೆ 1961ರ ಪ್ರಕಾರ ಹೊಂದಿದಲ್ಲಿ, ಅಂತಹ ಸಂಸ್ಥೆಗೆ ಹಸ್ತಾಂತರಿಸುವುದು, ಇವು ಕಾಲ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಒಳಪಟ್ಟಿರುತ್ತವೆ.

21. ಫಲಾನುಭವಿಗಳು:
ಸಂಘದ ಸೌಲಭ್ಯಗಳು ನಿಯಾಮವಳಿಗೊಳಪಟ್ಟು ಧರ್ಮ, ಜಾತಿ, ಮತ ಬೇದವಿಲ್ಲದೆ ಎಲ್ಲರಿಗೂ ದೊರೆಯತಕ್ಕದ್ದು.

22. ಹಣ ವಿನಿಯೋಗ ಬಳಸುವಿಕೆ:
ಸಂಸ್ಥೆಯ ಹಣ ಮತ್ತು ಆದಾಯಗಳನ್ನು ಸಂಸ್ಥೆಯ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೆ ಸಂಸ್ಥೆಯ ಸದಸ್ಯರ ವೇತನಕ್ಕಾಗಲೀ, ಆದಾಯ ಬಡ್ಡಿ ಭಾಗ ಮುಂತಾದವುಗಳಿಗೆ ಕೊಡಬಾರದು.

23. ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು: -

ಅಧ್ಯಕ್ಷರು :-
ಅಧ್ಯಕ್ಷರು ಸಂಘದ ಮತ್ತು ಕಾರ್ಯನಿರ್ವಾಹಕ ಸಮಿತಿಯ ಸಭೆಗಳನ್ನು ನಡೆಸತಕ್ಕದ್ದು ಮತ್ತು ಸಂಘಕ್ಕೆ ಸಂಬಂದಪಟ್ಟ ಎಲ್ಲಾ ಸಭೆಗಳನ್ನು ನಡೆಸುವುದು ಮತ್ತು ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸವುದು. ಸಂಘಕ್ಕೆ ಸಂಬಂದಪಟ್ಟ ವ್ಯವಹಾರಗಳಲ್ಲಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಡೆಸುವುದು, ವಿಶೇಷ ಸಂದರ್ಭಗಳಲ್ಲಿ ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಸಂಘದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

ಉಪಾಧ್ಯಕ್ಷರು:-
ಅಧ್ಯಕ್ಷರವರ ಸಂಘದ ಕೆಲಸಗಳಲ್ಲಿ ನೆರವಾಗುವುದು ಮತ್ತು ಅವರ ಗೈರು ಹಾಜರಿಯಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವುದು.

ಪ್ರಧಾನ ಕಾರ್ಯದರ್ಶಿ: -
ಪ್ರಧಾನ ಕಾರ್ಯದರ್ಶಿಯವರು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯಕಾರಿ ಸಮಿತಿಯ ಸಭೆ ಕರೆಯುವುದು, ಕನಿಷ್ಟ ಪಕ್ಷ 3 ತಿಂಗಳಿಗೊಮ್ಮೆ ಕಾರ್ಯಕಾರಿ ಸಮಿತಿ ಸಭೆ ಕರೆಯುವುದು, ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೆ ಸಭೆಯ ವಿಷಯ ಸೂಚಿಯ ಬಗ್ಗೆ ತಿಳುವಳಿಕೆ ನೋಟೀಸ್ ಜಾರಿಗೊಳಿಸುವುದು. ಕಾರ್ಯಕಾರಿ ಸಮಿತಿ ಸಭೆಯ ವಿಷಯ ಸೂಚಿಯಂತೆ ತೀರ್ಮಾನಗಳನ್ನು ನಡವಳಿ ಪುಸ್ತಕದಲ್ಲಿ ಬರೆಯುವುದು, ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಘದ ಪ್ರತಿ ಮಾಹೆಯ ಜಮಾ ಖರ್ಚು ಅನುಮೋದನೆ ಪಡೆಯುವುದು. ಪ್ರತಿವರ್ಷ ಸರ್ವ ಸದಸ್ಯರ ಸಭೆಯನ್ನು ನಿಗದಿತ ಅವಧಿಗೆ ನಡೆಸಲು ಕ್ರಮವಿಡುವುದು. ಸಂಘದ ಸದಸ್ಯರ ಸಹಿ, ನಗದು ಪುಸ್ತಕ, ಠೇವಣಿ ವಹಿ ಇತ್ಯಾದಿ ದಾಖಲೆಗಳುಳ್ಳ ಪುಸ್ತಕಗಳನ್ನು ಬರೆದು ನಿರ್ವಹಿಸುವುದು.

ಸಂಘದ ಎಲ್ಲಾ ಲೆಡ್ಜರಗಳು, ದಾಖಲೆಗಳು ಇತ್ಯಾದಿ ಪುಸ್ತಕಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಮುಂದೆ ಆಯ್ಕೆಯಾಗುವ ಪ್ರಧಾನ ಕಾರ್ಯದರ್ಶಿಗೆ ಸ್ವೀಕೃತಿ ಪಡೆದು ಪ್ರಭಾರ ವಹಿಸಿಕೊಡುವುದು.

ಸಂಘದ ಪರವಾಗಿ ಸರ್ಕಾರ, ಸರ್ಕಾರೇತರ, ಇಲಾಖೆ, ಸಂಸ್ಥೆಗಳಾದರೆ ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಗೆ ಪತ್ರ ವ್ಯವಹಾರ ನಡೆಸುವುದು, ಪ್ರತಿವರ್ಷ ತಪ್ಪದೇ ಸಂಘದ ಅಡಿಟ್ ಆದ ಲೆಕ್ಕಪರಿಶೋಧನೆ, ಆರ್ಥಿಕ ತಃಖ್ತೆಗಳು, ಕಾರ್ಯಕಾರಿ ಸಮಿತಿ ಪಟ್ಟಿ, ಸರ್ವ ಸದಸ್ಯರ ಸಭೆಯ ನಡವಳಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸುವುದು. ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ರೀತ್ಯಾ ಆಯಾಯ ಕಾಲಕ್ಕೆ ನಿರ್ವಹಿಸಬೇಕಾದ ಸಂಸ್ಥೆಯ ಜವಾಬ್ದಾರಿಗಳನ್ನು ನಿರ್ವಹಿಸುವುದು.

ಜಂಟಿ ಕಾರ್ಯದರ್ಶಿ: -
ಸಂಘದ ದಿನದ ದಿನದ ಕೆಲಸಗಳಲ್ಲಿ ಪ್ರಧಾನ ಕಾರ್ಯದರ್ಶಿಯವರಿಗೆ ಸಹಾಯ ಮಾಡುವುದು ಮತ್ತು ಅವರ ಗೈರು ಹಾಜರಿಯಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವುದು.

Principal
SJB Institute of Technology
# 67, BGS Health & Education City
Dr. Vishnuvardhan Road,
Kengeri, Bengaluru - 560 060.

ಈ ದಸ್ತಾವೇಜುಸಂಖ್ಯೆ 1103/10-11ರ ಘುಟಸಂಖ್ಯೆ 12

ಖಜಾಂಚಿಃ -

ಖಜಾಂಚಿಯವರು ಸಂಘದ ನಿಧಿಗಳ ಸುಪದಶನ್ನು ಹೊಂದಿರುತ್ತಾರೆ. ಸಂಘದ ಹಣವನ್ನು ಸ್ವೀಕರಿಸಲು ಮತ್ತು ಪಾವತಿಸಲು ಹಾಗೂ ತಾವು ಸ್ವೀಕರಿಸಿದ ಮತ್ತು ಪಾವತಿಸಿದ ಲೆಕ್ಕಗಳ ಪೂರ್ಣ ಹಾಗೂ ಕರಾರುವಾಕ್ ಆದ ಲೆಕ್ಕವನ್ನು ಸಂಘದ ಲೆಕ್ಕಪತ್ರಗಳಲ್ಲಿ ಸರಿಯಾಗಿ ಮತ್ತು ಕ್ರಮಬದ್ಧವಾಗಿ ನಿರ್ವಹಿಸಲು ಮತ್ತು ಪೂರಕ ಕಾಗದಪತ್ರಗಳನ್ನು ನಿರ್ವಹಿಸಲು ಅವರು ಜವಾಬ್ದಾರರಾಗಿರುತ್ತಾರೆ. ಮತ್ತು ಸದಸ್ಯರಿಂದ, ದಾನಿಗಳಿಂದ, ಸಂಸ್ಥೆಗಳಿಂದ, ಸರ್ಕಾರದಿಂದ, ಸರ್ಕಾರೇತರ ಸಂಸ್ಥೆಗಳಿಂದ ಸ್ವೀಕರಿಸುವ ವಂತಿಗೆ, ಕೊಡುಗೆ, ದಾನ ಇತ್ಯಾದಿ ಹಣಕ್ಕೆ ರಸೀದಿ ಹಾಕಿ ಸ್ವೀಕೃತಿ ನೀಡುವುದು.

ಜಿ. ನೋಂ.

1.
2.
3.
4.
5.
6.
7.
8.
9.
10.

ಸಂಘದ ಹೆಸರು: ಅಲ್ಯುಮ್ನಿ ಅಸೋಸಿಯೇಷನ ಆಫ್ ಎಸ್‌ಜೆಬಿಐಟಿ

ದಾಖಲೆಗಳ ವಿವರ: ನಿಯಮ ಮ ನಿಬಂಧನೆಗಳು

ಸ್ವೀಕರಿಸಿದ ದಿನಾಂಕ: 16/12/10

ನೋಂದಣಿ ಸಂಖ್ಯೆ: /10-11

ರಿಜಿಸ್ಟ್ರಾರ್‌ನಲ್ಲಿನ ಕ್ರಮಸಂಖ್ಯೆ: 12

ವಿಲೇಯಾದ ವಿವರ: ನೋಂದಾಯಿಸಿದೆ

ದಿನಾಂಕ: ...

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ

Registrar of Societies, Bangalore Urban District

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

ದಸ್ತಾವೇಜುಸಂಖ್ಯೆ 1103/10-11 ಪುಟಸಂಖ್ಯೆ 13

## ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ


ಎಸ್ ಜೆ ಬಿ ಇನ್ಸ ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಬಿ.ಜಿ.ಎಸ್.ಹೆಲ್ತ್ ಅಂಡ್ ಎಜುಕೇಷನ್ ಸಿಟಿ, ಉತ್ತರಹಳ್ಳಿ ರೋಡ್, ಕೆಂಗೇರಿ, ಬೆಂಗಳೂರು-560 060.

### ಕಾರ್ಯಕಾರಿ ಸಮಿತಿ ಸದಸ್ಯರುಗಳ ಪಟ್ಟಿ.

| ಕ್ರ.ಸಂ: | ಹೆಸರು ಮತ್ತು ವಿಳಾಸ<br>ಶ್ರೀಮತಿ/ಶ್ರೀಯುತರಾದ :- | ವಯಸ್ಸು | ಉದ್ಯೋಗ | ಪದವಿ | ರುಜು |
|---|---|---|---|---|---|
| 01. | ಡಾ: ಪುಟ್ಟರಾಜು<br>ನಂ.319, ಬಿ.ಇ.ಎಂ.ಎಲ್.7ನೇ ಸ್ಟೇಜ್,<br>ಮೈಲಸಂದ್ರ, ಕೆಂಗೇರಿ, ಬೆಂಗಳೂರು-60. | 48 | ಪ್ರಿನ್ಸಿಪಾಲ್ | ಅಧ್ಯಕ್ಷರು | |
| 02. | ಮೋಹನ್.ಹೆಚ್.ಎಸ್.<br>ನಂ.112, 3ನೇ ಕ್ರಾಸ್, ಕವಿಕಾ ಬಡಾವಣೆ,<br>ಕಾರ್ಡ್ ರಸ್ತೆ, ಬೆಂಗಳೂರು-26. | 35 | ಸರ್ವೀಸ್ | ಉಪಾಧ್ಯಕ್ಷರು | |
| 03. | ಅಭಯ ದೇಶಪಾಂಡೆ<br>ಉಗಾರ್‌ಕುರ್ದು, ಅಥಣಿ ತಾ:,<br>ಬೆಳಗಾಂ ಜಿಲ್ಲೆ. | 25 | ಸರ್ವೀಸ್ | ಪ್ರಧಾನ ಕಾರ್ಯದರ್ಶಿ | |
| 04. | ವೇದ.ಎಸ್.<br>ನಂ.412, WS, 7ನೇ ಮೈನ್,<br>3ನೇ ಬಿ ಕ್ರಾಸ್, ಕೆಂಗೇರಿ,<br>ಬೆಂಗಳೂರು. | 24 | ಸರ್ವೀಸ್ | ಜಂಟಿ ಕಾರ್ಯದರ್ಶಿ | |
| 05. | ಪ್ರದೀಪ್.ಕೆ.<br>ನಂ.28, ಹಳೆ ನಂ.102, 2ನೇ ಮೈನ್,<br>ಮೆಟ್ರೋ ಲೇಔಟ್, ನಾಯಂಡನಹಳ್ಳಿ,<br>ಬೆಂಗಳೂರು-39. | 25 | ಸರ್ವೀಸ್ | ಸಹ ಕಾರ್ಯದರ್ಶಿ | |
| 06. | ವಿಜಯಕುಮಾರ್<br>ನಂ.31/8, 12ನೇ ಮೈನ್, ವಿಜಯನಗರ,<br>ಬೆಂಗಳೂರು-40. | 38 | ಸರ್ವೀಸ್ | ಖಜಾಂಚಿ | |
| 07. | ರವಿಕುಮಾರ್<br>ನಂ.245/1, ಲಲಿತ ನಿವಾಸ, 3ನೇ ಮೈನ್,<br>2ನೇ ಬ್ಲಾಕ್, ಟಿ.ಆರ್.ನಗರ, ಬೆಂಗಳೂರು-28. | 30 | ಸರ್ವೀಸ್ | ಸದಸ್ಯರು | |
| 08. | ಕಿರಣ್.ಪಿ.<br>ನಂ.15, 3ನೇ ಕ್ರಾಸ್, ಅಶೋಕನಗರ,<br>ಬಿ.ಎಸ್.ಕೆ.1ನೇ ಸ್ಟೇಜ್, 2ನೇ ಬ್ಲಾಕ್,<br>ಬೆಂಗಳೂರು-60. | 25 | ಸರ್ವೀಸ್ | ಸದಸ್ಯರು | |
| 09. | ಸತ್ಯನಾರಾಯಣ.ಪೈ.<br>ನಂ.9, ಕೆಂಗೇರಿ ಸ್ಯಾಟಿಲೈಟ್ ಟೌನ್,<br>ಬೆಂಗಳೂರು-60. | 25 | ಸರ್ವೀಸ್ | ಸದಸ್ಯರು | |
| 10. | ಟಿ.ಎಸ್.ಅಬಿಶೇಖ್<br>ನಂ.199, ರಂಗನಾಥ, 9ನೇ ಕ್ರಾಸ್,<br>1ನೇ ಬ್ಲಾಕ್, ಬಿಕಾಸಿಪುರ, ಬೆಂಗಳೂರು. | 23 | ಸರ್ವೀಸ್ | ಸದಸ್ಯರು | |




| ಸಾಕ್ಷಿಗಳು: ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ರುಜು |
|---|---|---|---|
| ಪ್ರಿನ್ಸಿಪಾಲ್ ಎಸ್ ಜೆ ಬಿ ಐ ಟಿ<br>ಬಿ ಜಿ ಎಸ್ ಹೆಲ್ತ್ & ಎಜುಕೇಷನ್ ಸಿಟಿ<br>ಕೆಂಗೇರಿ, ಬೆಂಗಳೂರು | 42 | ಪ್ರಿನ್ಸಿಪಾಲ್ | |

Principal
SJB Institute of Technology
#67, BGS Health & Education City,
Dr. Vishnuvardhan Road,
Kengeri, Bengaluru-560 060





ಈ ದಸ್ತಾವೇಜುಸಂಖ್ಯೆ 1103/10-11ರ ಪುಟಸಂಖ್ಯೆ 14

ಜಿ. ನೋಂ.

ಸಂಘದ ಹೆಸರು: ಅಲ್ಯೂಮ್ನಿ ಅಸೋಸಿಯೇಷನ್ ಆಫ್ ಎಸ್‌ಜೆಬಿಐಟಿ

ದಾಖಲೆಗಳ ವಿವರ: ಸದಸ್ಯರ ಪಟ್ಟಿ

ಸ್ವೀಕರಿಸಿದ ದಿನಾಂಕ: 16/12/10

ನೋಂದಣಿ ಸಂಖ್ಯೆ: 1103/10-11

ರಿಜಿಸ್ಟ್ರಾರ್‌ನಲ್ಲಿನ ಕ್ರಮಸಂಖ್ಯೆ: 1103/10-11

ವಿಲೇಯಾದ ವಿವರ: ನೋಂದಾಯಿಸಿದೆ

ದಿನಾಂಕ: 28/12/2010

ಸಂಘಗಳ ನೋಂದಣಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ

Principal
SJB Institute of Technology
# 67, BGS Health & Education City,
Dr. Vishnuvardhan Road,
Kengeri, Bengaluru - 560 060.

3876